

# ಎರಡೂ ಜೀವಗಳಿಗೆ ಹೇಳಬೇಕಿತ್ತು...

ವರ್ಷಕ್ಕೆರಡು ಬಾರಿ ಸಿಗುತ್ತಿದ್ದ ರಜೆಗಳನ್ನು ಅಜ್ಜ ಅಜ್ಜಿಯ ಜೊತೆಯಲ್ಲೇ ಕಳೆಯುತ್ತಿದ್ದ ಕ್ಷಣಗಳು ಬದುಕಿನ ಸುಂದರ ಕ್ಷಣಗಳೇ. ಚಿಕ್ಕಮ್ಮ, ದೊಡ್ಡಮ್ಮಂದಿರ ಮಕ್ಕಳೊಡನೆ ಆಗುತ್ತಿದ್ದ ಜಗಳಗಳಿಂದ ಸಿಗುತ್ತಿದ್ದ ಬೈಗುಳಗಳು, ಪೆಟ್ಟುಗಳಿಂದ ಪಾರಾಗಲು ನಾನು ಆಶ್ರಯಿಸುತ್ತಿದ್ದದ್ದು ಅಜ್ಜ ಅಜ್ಜಿಯರನ್ನು. ಊಟ ಬಿಟ್ಟವಳಂತೆ ನಟಿಸುತ್ತಾ, ದನದ ಹಟ್ಟಿಯಲ್ಲೋ, ಗೇರುಬೀಜದ ಗುಡ್ಡೆಯಲ್ಲೋ ಕುಳಿತಾಗ 'ಪಾಪದ ಹುಡುಗಿ, ನಿನ್ನಿಂದಾಗಿ ಊಟ ತಿಂಡಿ ಬಿಟ್ಟು ಕೂತಿದ್ದಾಳೆ ನೋಡು. ಹೋಗಿ ಕರ್ಕೊಂಡು ಬಾ. ಇಲ್ಲಾಂದ್ರೆ ನಾನೂ ಇವತ್ತು ಉಪವಾಸವೇ...' ಅಜ್ಜ ಅಬ್ಬರಿಸಿದಾಗ, ತನ್ನಿಂದಾಗಿ ತಂದೆ ಉಪವಾಸ ಇರಬೇಕಾ? ಎಂದು ಹೆದರಿ ಬೆಕ್ಕಿನ ಮರಿಯಂತೆ ತಲೆಯಾಡಿಸುತ್ತಿದ್ದ ಅಮ್ಮನ ನಡೆ ಇಂದು ನನಗೆ ಪಶ್ಚಾತ್ತಾಪವನ್ನು ಮೂಡಿಸುತ್ತದೆ.

ಇರುಳ ಕತ್ತಲೆಗೆ ಸವಾಲೆಸೆಯುವ ಬಲ್ಬುಗಳ, ಟ್ಯೂಬ್‌ಲೈಟುಗಳ ಮುಖವನ್ನೇ ಕಂಡಿರದ ಹಳ್ಳಿಮನೆಯ ಪ್ರತಿಯೊಂದು ಕೋಣೆಯಲ್ಲೂ ಅಜ್ಜಿ ಬೆಳಗಿಸುತ್ತಿದ್ದ ಚಿಮಿಣಿ ದೀಪಗಳು ಕತ್ತಲೆಯನ್ನು ನುಂಗಿಹಾಕುತ್ತಿದ್ದವು. ಅಜ್ಜಿಯ ಕೈತುತ್ತು, ನನಗಾಗಿ ಮಾಡುತ್ತಿದ್ದ ತಿಂಡಿಗಳು, ನೀರು ಮಾವು, ಉಪ್ಪುಸೊಳೆಗಳ ರುಚಿ, ರಾತ್ರಿಯ ನಿದ್ದೆಗೆ ಜೊತೆಯಾಗುತ್ತಿದ್ದ ಜೋಗುಳಗಳು ಈಗಿನ ಯಾವ ವ್ಯವಸ್ಥೆಗೂ ಕಡಿಮೆಯಿಲ್ಲ.

ಆಧುನಿಕತೆಯಿಂದಾಗಿ ಭಾವನಾತ್ಮಕತೆಯ ಕೊಂಡಿ ಕಳಚುತ್ತಿರುವ ಈ ದಿನಗಳಲ್ಲೂ ನನ್ನಲ್ಲಿ ಉಳಿದುಕೊಂಡಿರುವ ಭಾವನಾತ್ಮಕತೆಯ ಸೆಲೆ ನನ್ನ ತಾಯಿ ತಂದೆ, ಅಜ್ಜ ಅಜ್ಜಿಯರಿಂದ ಬಂದ ಬಳುವಳಿಯೇ. ತೊದಲು ಮಾತು, ತುಂಟಾಟಗಳಿಗಷ್ಟೇ ಸೀಮಿತವಾಗಿದ್ದ ಅಂದಿನ ಬದುಕಿಗೂ, ಜಗತ್ತಿನ ಚರ್ಯೆಗಳನ್ನು ಅರಿವಿಗೆ ತಂದುಕೊಂಡು ಬದುಕುತ್ತಿರುವ ಇಂದಿನ ಬದುಕಿಗೂ ಅಜಗಜಾಂತರ ವ್ಯತ್ಯಾಸ. ಈ ಮಧ್ಯದ ಅವಧಿಯಲ್ಲಿ ಕಾಲನ ಕರೆಗೆ ಓಗೊಟ್ಟು ಸಾಗಿದ ಆ ಎರಡೂ ಜೀವಗಳ ಬಳಿ ಹೇಳದೇ ಉಳಿದ ಮಾತೆಂದರೆ 'ಲವ್ ಯು ಅಜ್ಜ ಅಜ್ಜಿ'.

—ನಯನ ಜಿ.ಎಸ್., ದಕ್ಷಿಣ ಕನ್ನಡ

# ನನ್ನಲ್ಲೇ ಉಳಿದು ಹೋದ ಕ್ಷಮೆ

ನನಗೆ... ಅಮ್ಮನ ಮಡಿಲಲ್ಲಿ ಮಲಗಿದ್ದಾಗ, ಅವಳು ನನ್ನ ತಲೆಯ ಮೇಲೆ ಕೈಯಾಡಿಸಿದಾಗ ಹಾಗೂ ನನ್ನ ತಂದೆ ಮುಖ ಸವರಿ, ಬೆನ್ನು ತಟ್ಟಿದಾಗ, ಇವೆರಡೂ ಸ್ವರ್ಗ ಸದೃಶಕ್ಕೆ ಸಮ. ಆಗ ನಾನು ಹರ್ಪಿಸ್ ಸಮಸ್ಯೆಯಿಂದ ಬಳಲುತ್ತಿದ್ದೆ. ಅದೇ ಸಮಯದಲ್ಲಿ ನನ್ನ ತಂದೆಯವರು ಕೆಳಗೆ ಬಿದ್ದಿದ್ದರಿಂದ ಅವರಿಗೆ ಸ್ಟ್ರೋಕ್ ಆಗಿ, ಮಾತು ಹೆಚ್ಚು ಕಮ್ಮಿ ನಿಂತೇ ಹೋಗಿ, ಆಸ್ಪತ್ರೆಯ ಐಸಿಯುನಲ್ಲಿದ್ದರು.

ಆ ಹಿಂದಿನ ದಿನ, ನಾನು ಎಂದೂ ಅಪ್ಪನಿಗೆ ಬೇಜಾರಾಗುವಂತೆ ಬೈಯದವನು, ನಾನು ಮಾನಸಿಕ ಹಾಗೂ ದೈಹಿಕವಾಗಿ ಬಾಧಿತನಾಗಿದ್ದರಿಂದಲೋ ಏನೋ, ಅವರು ಅವತ್ತು ನಾನು ಹೇಳಿದ ಸ್ಥಳದಲ್ಲಿ ಇಲ್ಲದೆ ಇದ್ದ ಕಾರಣ ಅವರಿಗೆ ಬೈದುಬಿಟ್ಟೆನು. ಅವರು ನನ್ನಿಂದ ಅದನ್ನು ಊಹಿಸಿರಲಿಲ್ಲವೇನೋ. ನಾನು ಹಾಗೆ ಮಾತನಾಡಿದ್ದೇ, ಮೌನಕ್ಕೆ ಶರಣಾಗಿಬಿಟ್ಟರು.

ನಾನು ಅವರಿಗೆ ಕ್ಷಮೆ ಕೇಳುವಷ್ಟರಲ್ಲಿ, ಅವರನ್ನು ಆಸ್ಪತ್ರೆಗೆ ಸೇರಿಸುವ ಪರಿಸ್ಥಿತಿ ಬಂತು ಮತ್ತು ಅವರು ಮಾತನಾಡುವ ಅಥವಾ ನಮ್ಮ ಮಾತನ್ನು ಅರ್ಥಮಾಡಿಕೊಳ್ಳುವ ಸ್ಥಿತಿಯಲ್ಲಿ ಇರಲಿಲ್ಲ. ಮುಂದೆ ನಾಲ್ಕೇ ದಿನಗಳಲ್ಲಿ ನಮ್ಮನ್ನು ಬಿಟ್ಟು ಅಗಲಿದರು. ನನ್ನ ಕ್ಷಮೆಯು ನನ್ನಲ್ಲೇ ಉಳಿದು ಹೋಯಿತು. ಇದಾಗಿ, ಇಪ್ಪತ್ತನಾಲ್ಕು ವರ್ಷವಾದರೂ, ನನಗೆ ಇಂದಿಗೂ ನಿರಂತರವಾಗಿ ಆ ಬೇಸರ ಕಾಡುತ್ತಲೇ ಇದೆ.

—ವಿ. ವಿಜಯೇಂದ್ರ ರಾವ್



## ಬಟವಾಡೆಯಾಗದ ಪ್ರೇಮಪತ್ರ

'ಸೋಲುವುದೇ ಪ್ರೀತಿಯಲ್ಲಿ ಗೆಲುವು' ಎಂಬ ಮಾತಿದೆ. ಪ್ರೇಮಿಗಳ ನಡುವೆ ವಿನಿಮಯವಾಗುವ ಕಣ್ಣ ನೋಟಗಳು, ತುಟಿಯಂಚಿನಲ್ಲಿ ಕಾಣಿಸಿಕೊಳ್ಳುವ ಮುಗುಳುನಗು, ನವಿರಾದ ಭಾವಗಳು ಎದೆಯಲ್ಲಿ ಪ್ರೀತಿಯ ದೀಪ ಹೊತ್ತಿಸುವ ರಾಯಭಾರಿಗಳು. ತಾವು ಇಷ್ಟಪಟ್ಟವರಿಗೆ, ಪ್ರೀತಿಸಿದವರಿಗೆ ತಮ್ಮ ಪ್ರೀತಿಯನ್ನು ನಿವೇದನೆ ಮಾಡಿಕೊಳ್ಳಲು, ತಮ್ಮ ಹೃದಯದ ಪಿಸುಮಾತುಗಳನ್ನು ದಾಟಿಸಲು ಪ್ರೇಮಪತ್ರವೆಂಬ ಮಾಧ್ಯಮ ಎಲ್ಲ ಕಾಲಕ್ಕೂ ಪ್ರಸ್ತುತವೇ. ಆದರೆ ಎಷ್ಟೋ ಬಾರಿ ತಮ್ಮ ಪ್ರೀತಿಯನ್ನು ನಿವೇದಿಸಿಕೊಳ್ಳಲು ಸಾಧ್ಯವಾಗದ ಸಂದರ್ಭಗಳೇ ಹೆಚ್ಚಾಗಿರುತ್ತವೆ. ತಮ್ಮ ಮನದ ಮಾತುಗಳನ್ನು ತೆರೆದಿಡಲು ಪ್ರೇಮಪತ್ರವನ್ನು ಬರೆದಿದ್ದರೂ ಅದನ್ನು ನೀಡಲಾಗದೇ ಹಾಗೆಯೇ ಪ್ರೀತಿಯ ಕನಸೊಂದು ಮನದಲ್ಲೇ ಉಳಿದು ಹೋಗುವುದೂ ಉಂಟು. ನಿಮ್ಮ ಜೀವನದಲ್ಲಿಯೂ ಅಂಥ ಸನ್ನಿವೇಶ ನಡೆದಿದ್ದರೆ, ಬರೆದ ಪ್ರೇಮಪತ್ರವೊಂದು ಬಟವಾಡೆಯಾಗದೆ ಉಳಿದಿದ್ದರೆ, ಆ ಸಂಗತಿಯನ್ನು 'ಸುಧಾ'ದೊಂದಿಗೆ ಹಂಚಿಕೊಳ್ಳಬಹುದು. ಬರಹ 150ರ ಪದಮಿತಿಯಲ್ಲಿರಲಿ. ಕೊನೆಯ ದಿನಾಂಕ ಫೆಬ್ರುವರಿ 15. ಲೇಖನವನ್ನು ನುಡಿ ಅಥವಾ ಯುನಿಕೋಡ್‌ನಲ್ಲಿ editorsu@sudha.co.inಗೆ ಇಮೇಲ್ ಮಾಡಿ.